ದಿಃ 9.09.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಎ.ಬಿ. ವಕೀಲರಿಂದ ,**

5. 1 ನೇ ಪ್ರತಿವಾದಿ ವ್ಯವಸಾಯ ಮಾಡುತ್ತಾರೆ. ಅವರಿಗೆ ಸ್ವಂತ ಜಮೀನು ಇರುತ್ತದೆ. ಅದನ್ನು ನಾನು ನೋಡಿರುತ್ತೇನೆ. ಆತನಿಗೆ ಸುಮಾರು 7 ಎಕರೆ ಜಮೀನು ಇರುತ್ತದೆ. ಅದು ನನ್ನ ತಂದೆಗೆ ಸೇರಿದ್ದು. ಆ ಪೈಕಿ 2 ಎಕರೆ ಜಮೀನನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ಉಳಿಕೆ 5 ಎಕರೆ ಜಮೀನು ಯಾವ ಸರ್ವೆ ನಂಬರ್ ನಲ್ಲಿ ಇರುತ್ತದೆ ಎಂದರೆ ಸಾಕ್ಷಿ ಸರ್ವೆ ನಂಬರ್ 26 ರಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಗೆ ಸೇರಿದ ಎಲ್ಲಾ ಜಮೀನನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ಒಟ್ಟು 15 ಎಕರೆ ಜಮೀನನ್ನು ಸೇರಿಸಿರುತ್ತೇವೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಈ ನ್ಯಾಯಾಲಯಕ್ಕೆ ಹಾಜರಾಗಿಲ್ಲ ಎಂದರೆ ನನಗೆ ತಿಳಿದಿಲ್ಲ. ಉದ್ದೇಶಪೂರ್ವಕವಾಗಿ ನಾನು 1 ನೇ ಪ್ರತಿವಾದಿಯ ಜಮೀನನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಮಾತು ಕೇಳಿ ನಾನು ಈ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಹೆಸರಿನಲ್ಲಿ ಪದ್ಮೇನಹಳ್ಳಿ ಗ್ರಾಮದಲ್ಲಿ ಸರ್ವೆ ನಂಬರ್ 47 ರಲ್ಲಿ 2 ಎಕರೆ ಜಮೀನು ಇರುತ್ತದೆ ಎಂದರೆ ಸಾಕ್ಷಿ ಅದು ಆತನಿಗೆ ಬಗರ್ ಹುಕುಂ ಮೂಲಕ ಬಂದಿರುತ್ತದೆ ಎಂದು ತಿಳಿದು ಅದನ್ನು ಸೇರಿಸಿಲ್ಲ, ಈಗ ಅದನ್ನು ಸೇರಿಸುತ್ತೇವೆ ಎಂದು ನುಡಿಯುತ್ತಾರೆ. ಸದರಿ ಜಮೀನು ಸಹ ನನ್ನ ತಂದೆಗೆ ಸೇರಿದ್ದು ಎಂದರೆ ಸರಿ.

6. ನನ್ನ ತಂದೆ ದಿಃ 29-11-2006 ರಂದು ವಿಲ್ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಲ್ ಮೂಲಕ ನನ್ನ ತಂದೆ ಜಮೀನುಗಳ ಹಂಚಿಕೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ತಮ್ಮ ಜೀವಿತ ಕಾಲದಲ್ಲಿ ಪಾಲು ಪಟ್ಟಿ ಮಾಡಿಕೊಟ್ಟಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ವಿಲ್ ಹಾಗೂ ದಾನ ಪತ್ರದ ಮೂಲಕ ಜಮೀನುಗಳ ಹಂಚಿಕೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನಾನು ಹೇಳಿದಂತೆ ಯಾವುದೇ ಪಾಲು ಪಟ್ಟಿ ಆಗಿಲ್ಲ ಎಂದರೆ ಸರಿಯಲ್ಲ. ಯಾವುದೇ ತಂಟೆ ತಕರಾರನ್ನು ತಡೆಯಲು ನನ್ನ ತಂದೆ ವಿಲ್ ಬರೆದ ನಂತರ ದಾವಾ ಅನುಸೂಚಿ 4 ನೇ ಸ್ವತ್ತಿನ ಸಂಬಂಧ 2 ನೇ ಪ್ರತಿವಾದಿ ಹೆಸರಿಗೆ ಒಂದು ದಾನ ಪತ್ರ ಸಹ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆ ಹೂಡುವ ಪೂರ್ವದಲ್ಲೂ ಸದರಿ ಜಮೀನಿನಲ್ಲಿ 2 ನೇ ಪ್ರತಿವಾದಿಯೇ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಂಗತಿ ನನಗೆ ತಿಳಿದಿದ್ದರು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ 2 ಹಾಗೂ 4 ನೇ ಸ್ವತ್ತಿನಲ್ಲಿ 2 ನೇ ಪ್ರತಿವಾದಿ ಯಾವ ಆಧಾರದಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದು ನಾನು ನನ್ನ ತಂದೆಯನ್ನು ಅಥವಾ 2 ನೇ ಪ್ರತಿವಾದಿಯನ್ನು ಕೇಳಿಲ್ಲ ಎಂದರೆ ಸರಿ. ನನ್ನ ತಂದೆ ಸದರಿ ಸ್ವತ್ತುಗಳನ್ನು 2 ನೇ ಪ್ರತಿವಾದಿಗೆ ನೀಡಿದ ಸಂಗತಿ ನನಗೆ ತಿಳಿದಿದ್ದ ಕಾರಣ ನಾನು ಆ ಬಗ್ಗೆ ನನ್ನ ತಂದೆಯನ್ನು ಕೇಳಿಲ್ಲ ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳ ಪಹಣಿ 2 ನೇ ಪ್ರತಿವಾದಿ ಹೆಸರಿಗೆ ಯಾವ ಸಾಲಿನಿಂದ ಇರುತ್ತದೆ ನನಗೆ ತಿಳಿದಿಲ್ಲ. ಸದರಿ ಸಂಗತಿ ನನಗೆ ಈ ದಾವೆ ಹೂಡಿದ ನಂತರ ತಿಳಿಯಿತು.

7. ನಾನು ಮನೆ ನಿರ್ಮಿಸಿರುವ ಜಾಗ ನಾನು ನನ್ನ ತಂದೆಯಿಂದ ಖರೀದಿಸಿದ ಜಾಗವಾಗಿರುತ್ತದೆ. ಸದರಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಸದರಿ ಪತ್ರವನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ಅದರ ಪಹಣಿ ಈಗಲೂ ನನ್ನ ತಂದೆಯ ಹೆಸರಿಗೆ ಇರುತ್ತದೆ. ಸದರಿ ಸ್ವತ್ತನ್ನು ನಾನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಅದು ನನ್ನ ಸ್ವಂತ ಸ್ವತ್ತಾದ ಕಾರಣ ಅದನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಸದರಿ ಸ್ವತ್ತು ನನಗೆ ವಿಭಾಗದಲ್ಲಿ ಬಂದಿದ್ದು ನಾನು ಹೇಳಿದಂತೆ ಅದನ್ನು ನನ್ನ ತಂದೆಯಿಂದ ಖರೀದಿಸಿಲ್ಲ ಎಂದರೆ ಸರಿಯಲ್ಲ. ನನ್ನ ಪಾಲಿಗೆ ಸದರಿ ಜಾಗ ಬಂದಿದ್ದು ಅದರಲ್ಲಿ ನಾನು ಮನೆ ನಿರ್ಮಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಜೀವಿತ ಕಾಲದಲ್ಲಿ ಅವರ ಎಲ್ಲಾ ಸ್ವತ್ತುಗಳ ಪಾಲು ಆಗಿರುತ್ತದೆ ಎಂದರೆ ಸರಿಯಲ್ಲ. ಆ ಕಾರಣ ದಾವಾ

ಸ್ವತ್ತುಗಳಲ್ಲಿ ನನಗೆ ಯಾವುದೇ ಪಾಲು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರ ಸ್ವತ್ತನ್ನು ಲಪಟಾಯಿಸಲು ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**3 ನೇ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಟಿ.ಶ್ರೀಕಾಂತ್)**
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ**